

ಶೂಟಿಂಗ್ ಸ್ಪರ್ಧೆಯ ಮಿಶ್ರ ವಿಭಾಗದಲ್ಲಿ ಭಾರತದ ಭರವಸೆ: ಮನು ಬಾಕರ್ ಮತ್ತು ಸೌರಭ್ ಚೌಧರಿ

‘ಟಾಪ್’ (ಟಾರ್ಗೆಂಟ್ ಒಲಿಂಪಿಕ್ ಪೋಡಿಯಂ) ಯೋಜನೆ ಆರಂಭಿಸಿತು. ಒಲಿಂಪಿಕ್ಸ್‌ಗೆ ತರಬೇತಿ ಪಡೆಯಲು ಹಣಕಾಸಿನ ನೆರವು ನೀಡುವುದು, ವಿದೇಶಿ ಪ್ರಯಾಣ, ಕ್ರೀಡಾ ಸಾಮಗ್ರಿಗಳ ಖರೀದಿ, ವೈಯಕ್ತಿಕ ಕೋಚ್‌ಗಳ ನೇಮಕ ಹಾಗೂ ಸಿಬ್ಬಂದಿಯನ್ನು ಪಡೆಯಲು ಈ ಹಣ ಬಳಕೆ ಮಾಡಲಾಯಿತು. ಆದರೂ, ಭಾರತದ ವಿಶ್ವ ಕ್ರೀಡಾವೇದಿಕೆಯಲ್ಲಿ ಹೆಚ್ಚು ಪದಕಗಳನ್ನು ಗೆಲ್ಲಲು ಸಫಲವಾಗಿಲ್ಲ. 2016ರ ಒಲಿಂಪಿಕ್ಸ್ ಇದಕ್ಕೆ ಸಾಕ್ಷಿ.

ಹಿಂದಿನ ಒಲಿಂಪಿಕ್ಸ್‌ಗೆ ‘ಟಾಪ್’ ಯೋಜನೆಯಡಿ ಕ್ರೀಡಾಪಟುಗಳಿಗಾಗಿ ಒಟ್ಟು ₹36.85 ಕೋಟಿ ಖರ್ಚು ಮಾಡಲಾಗಿದೆ. ಇದರಲ್ಲಿ ಅರ್ಧದಷ್ಟು ಹಣ ಶೂಟರ್‌ಗಳಿಗೆ ವೆಚ್ಚ ಮಾಡಲಾಗಿದೆ. ಆದರೆ ಪದಕಗಳು ಬಂದಿದ್ದು ಬ್ಯಾಡ್ಮಿಂಟನ್ ಆಟಗಾರ್ತಿ ಪಿ.ವಿ. ಸಿಂಧು ಹಾಗೂ ಕುಸ್ತಿ ಪಟು ಸಾಕ್ಷಿ ಮಲಿಕ್ ಅವರಿಗೆ.

ಕೇಂದ್ರ ಸರ್ಕಾರ 2020–21ನೇ ಸಾಲಿನಲ್ಲಿ ಕ್ರೀಡಾ ಇಲಾಖೆಗೆ ₹2,826.92 ಕೋಟಿ ಅನುದಾನ ಮೀಸಲಿಟ್ಟಿದೆ. ಬೇರೆ ದೇಶಗಳಿಗೆ ಹೋಲಿಸಿದರೆ ಈ ಅನುದಾನ ಕಡಿಮೆಯೇ. ಯುನೈಟೆಡ್ ಕಿಂಗ್‌ಡಮ್ ಕ್ರೀಡಾ ಸೌಲಭ್ಯಗಳನ್ನು ಒದಗಿಸಲು ಹಾಗೂ ತರಬೇತಿಗೆ ವಾರ್ಷಿಕ ₹9 ಸಾವಿರ ಕೋಟಿ ಬಜೆಟ್ ಮೀಸಲಿಡುತ್ತದೆ.

## ಭಾರತ ಎಷ್ಟು ಪದಕ ಗೆಲ್ಲಬಹುದು?

ಪ್ರತಿ ಒಲಿಂಪಿಕ್ಸ್ ಆರಂಭವಾಗುತ್ತಿದ್ದಂತೆ ಭಾರತ ಎಷ್ಟು ಪದಕಗಳನ್ನು ಗೆಲ್ಲುತ್ತದೆ ಎನ್ನುವ ಲೆಕ್ಕಾಚಾರ ಶುರುವಾಗುತ್ತದೆ. ಟೋಕಿಯೊ ಒಲಿಂಪಿಕ್ಸ್‌ಗೂ ಈಗ ಇದೇ ಪ್ರಶ್ನೆ ಎದುರಾಗಿದೆ. ಬ್ಯಾಡ್ಮಿಂಟನ್, ಶೂಟಿಂಗ್ ಹಾಗೂ ಕುಸ್ತಿ ಕ್ರೀಡೆಗಳಲ್ಲಿ ಪದಕಗಳ ಭರವಸೆಯಿದೆ. ಟೋಕಿಯೊ ಅಂಗಳದಲ್ಲಿ ಪದಕದ ಭರವಸೆ ಮೂಡಿಸಿರುವ ಕ್ರೀಡಾತಾರೆಗಳನ್ನು ಕೆಳಗಿನಂತೆ ಗುರ್ತಿಸಬಹುದು.

## ಬ್ಯಾಡ್ಮಿಂಟನ್ ತಾರೆ ಸಿಂಧು

2016ರ ‘ರಿಯೊ ಒಲಿಂಪಿಕ್ಸ್’ನ ಬ್ಯಾಡ್ಮಿಂಟನ್ ಸ್ಪರ್ಧೆಯ ಸಿಂಗಲ್ಸ್ ವಿಭಾಗದಲ್ಲಿ ಬೆಳ್ಳಿ ಪದಕ ಜಯಿಸಿ ಭಾರತದಲ್ಲಿ ಹೊಸ ಅಲೆ ಹುಟ್ಟುಹಾಕಿದ ಪಿ.ವಿ. ಸಿಂಧು ಈ ಬಾರಿಯೂ ಪದಕ ಗೆಲ್ಲುವ ನೆಚ್ಚಿನ ಕ್ರೀಡಾಪಟುವೆನಿಸಿದ್ದಾರೆ. ಹಿಂದಿನ ಎರಡು ವರ್ಷಗಳಿಂದ ಅವರು ಗೆದ್ದ ಕೆಲವು ಪ್ರಶಸ್ತಿಗಳು ಭಾರತದ ಕ್ರೀಡಾಪ್ರೇಮಿಗಳ ಉತ್ಸಾಹ ಹೆಚ್ಚಿಸಿವೆ.

2018ರಲ್ಲಿ ಆಸ್ಟ್ರೇಲಿಯಾದಲ್ಲಿ ಕಾಮನ್‌ವೆಲ್ತ್ ಕ್ರೀಡಾಕೂಟದ ಸಿಂಗಲ್ಸ್‌ನಲ್ಲಿ ಬೆಳ್ಳಿ ಮತ್ತು ಮಿಶ್ರ ಡಬಲ್ಸ್ ವಿಭಾಗದಲ್ಲಿ ಚಿನ್ನದ ಪದಕ ಜಯಿಸಿದ್ದರು. ಅದೇ ವರ್ಷ ಜಕಾರ್ತದಲ್ಲಿ ಜರುಗಿದ ಕಾಮನ್‌ವೆಲ್ತ್ ಕೂಟದ ಸಿಂಗಲ್ಸ್‌ನಲ್ಲಿ ಬೆಳ್ಳಿ ಪಡೆದರು. 2017ರಿಂದ ಸತತ ಮೂರು ವಿಶ್ವಕಪ್‌ಗಳಲ್ಲಿ ಎರಡು ಬೆಳ್ಳಿ ಹಾಗೂ ಒಂದು ಚಿನ್ನದ ಪದಕ ಮುಡಿಗೇರಿಸಿಕೊಂಡಿದ್ದಾರೆ. ಇಷ್ಟೆಲ್ಲ ಉತ್ತಮ ಪ್ರದರ್ಶನ ತೋರಿದರೂ ಸಿಂಧು ಹಲವು ಟೂರ್ನಿಗಳಲ್ಲಿ ಸ್ಥಿರ ಪ್ರದರ್ಶನ ನೀಡಿಲ್ಲ. ಒಲಿಂಪಿಕ್ಸ್ ನಂತರ ಆಡಿದ ಬಹುತೇಕ ಟೂರ್ನಿಗಳಲ್ಲಿ ಸಿಂಧು ಅವರ ಪ್ರಬಲ ಎದುರಾಳಿ ಕ್ಯಾರೊಲಿನಾ ಮರೀನ್ ಗಾಯದ ಕಾರಣದಿಂದ ಪಾಲ್ಗೊಂಡಿರಲಿಲ್ಲ. ಇತ್ತೀಚೆಗೆ ಸ್ಪರ್ಧಾ ಕಣಕ್ಕೆ ಮರಳಿದ ಮರೀನ್ ವಿರುದ್ಧ ಸಿಂಧು ಸೋಲು ಕಂಡಿದ್ದರು.

## ಸೌರಭ್ ಚೌಧರಿ (ಶೂಟಿಂಗ್)

ಉತ್ತರ ಪ್ರದೇಶದ ಮೀರಟ್‌ನ 19 ವರ್ಷದ ಸೌರಭ್ ಚೌಧರಿ ಶೂಟಿಂಗ್‌ನ 10 ಮೀಟರ್ ಏರ್ ಪಿಸ್ತೂಲ್ ವಿಭಾಗದಲ್ಲಿ ಸ್ಪರ್ಧಿಸಲಿದ್ದಾರೆ. ಒಲಿಂಪಿಕ್ಸ್ ಅರ್ಹತಾ ಸುತ್ತಿನ ಸ್ಪರ್ಧೆಗಳಲ್ಲಿ ಉತ್ತಮ ಪ್ರದರ್ಶನ ತೋರಿರುವ ಸೌರಭ್ ಹಿಂದಿನ ಎರಡು ವರ್ಷಗಳಿಂದ ಸ್ಥಿರ ಪ್ರದರ್ಶನ ತೋರುತ್ತಿರುವ ವಿಶ್ವದ ಅತ್ಯುತ್ತಮ ಶೂಟರ್‌ಗಳಲ್ಲಿ ಒಬ್ಬರಾಗಿದ್ದಾರೆ. 2019ರಿಂದ ನಾಲ್ಕು ಶೂಟಿಂಗ್ ವಿಶ್ವಕಪ್‌ಗಳಲ್ಲಿ ಎರಡು ಚಿನ್ನದ ಪದಕ, ಒಂದು ಬೆಳ್ಳಿ ಮತ್ತು ಒಂದು ಕಂಚು ಜಯಿಸಿದ್ದು ಇದಕ್ಕೆ ಸಾಕ್ಷಿ. ಅದೇ ವರ್ಷ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಗೆದ್ದುಕೊಂಡಿದ್ದರು.

ಸೌರಭ್ 2018ರಿಂದ ಸೀನಿಯರ್ ವಿಭಾಗದ ಸ್ಪರ್ಧೆಗೆ ಪದಾರ್ಪಣೆ ಮಾಡಿದರು. ಆಡಿದ ಪ್ರತಿ ಟೂರ್ನಿಯಲ್ಲಿಯೂ ಫೈನಲ್ ಪ್ರವೇಶಿಸಿದ್ದು ವಿಶೇಷ. ಅದೇ ವರ್ಷ ಯೂತ್ ಒಲಿಂಪಿಕ್ ಕ್ರೀಡಾಕೂಟದಲ್ಲಿ ಚಿನ್ನ ಜಯಿಸಿದ್ದರು. 2017 ಹಾಗೂ 2018ರ ವಿಶ್ವ ಜೂನಿಯರ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಚಿನ್ನ ಹಾಗೂ ಕಂಚು ಗೆದ್ದುಕೊಂಡಿದ್ದರು. ಹಲವಾರು ಪದಕಗಳನ್ನು ಜಯಿಸಿದ್ದರೂ ಸೌರಭ್, ವಿಶ್ವಮಟ್ಟದ ದೊಡ್ಡ ಕ್ರೀಡಾಕೂಟದ ಸವಾಲು





